Houses to Poura Karmikas in Mangalore

310 SRI B. V. KAKKILAYA (Vittal).—Will the Minister for Municipal Administration be pleased to State:—

(*a*) whether the Mangalore Municipality has submitted to the Government a proposal for providing houses to the Poura Karmikas;

(*b*) if so, the number of houses and the cost of construction proposed to be constructed;

(*c*) the action the Government has taken so far in this regard?

SRI H. C. SRIKANTAIAH (Minister for Municipal Administration).—

(*a*) No

(*b*) Does not arise

(*c*) The matter is being pursued with the Divisional Commissioner, Mysore Division, Mysore.

ಶ್ರೀ ಜಿ. ಎ. ಬೊಪಿದ್ದೀನ್.—(ಶ್ರೀ ಬಿ. ವಿ. ಕಕ್ಕಿಲಾಯ ಅವರ ಪರವಾಗಿ) ಮಾನ್ಯ ಅಧ್ಯಕ್ಷರೇ, ನನಗೆ ಗೊತ್ತಿದ್ದ ಹಾಗೆ ಹಿಂದೆ ಕೂಡ ಇದೇ ತರಹ ಪ್ರಶ್ನೆ ಕಳುಹಿಸಿದ್ದು ಇದೇ ರೀತಿಯ ಉತ್ತರವೂ ಬಂದಿತ್ತು. ಮುನಿಸಿಪಲ್ ಬಜೆಟ್ಟಿನಲ್ಲಿ ೧೦% ಪರ್ಸಂಟ್ ಹೆಡ್ಕೂಲ್ಲಿ ಕ್ಯಾಸ್ಟ್ ಮತ್ತು ಹೆಡ್ಕೂಲ್ಲಿ ಟ್ರೈಬ್ಸ್‌ನವರಿಗೆ ಮೀಸಲಾಗಿಟ್ಟಿರಬೇಕು, ಅದನ್ನು ಇವರಿಗೆ ಉಪಯೋಗಿಸಬೇಕು ಎಂದು ಇದೆ. ಆದರೂ ಸಹ ಮುನಿಸಿಪಾಲಿಟಿಯವರು ಸರಿಯಾಗಿ ಉಪಯೋಗ ಮಾಡಿಲ್ಲ. ದುಡ್ಡು ಹಾಗೆಯೇ ಅಕ್ಯಮುಲೇಟ್ ಆಗಿದೆ. ಇವರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂದು ಹೇಳುತ್ತಿರಾ?

†ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆಧ್ಯಕ್ಷರೇ, ಮಂಗಳೂರು ಪುರಸಭೆಯವರು ನಾಲ್ಕನೇ ದರ್ಜೆ ನೌಕರರಿಗೆ ರೆಸಿಡೆನ್ಷಿಯಲ್ ಕ್ವಾರ್ಟರ್ಸ್ ಕಟ್ಟಬೇಕು ಎಂದು ಪ್ರೊಪೋಸಲ್ ಕಳಿಸಿದ್ದಾರೆ. ಪಂಣ್ಣಗುಡ್ಡೆ ಮತ್ತು ಜಪ್ಪಿನಮೊಗರುವಿನಲ್ಲಿ ಬ್ಲಾಕ್-೧ ಮತ್ತು ಬ್ಲಾಕ್-೨ ಎಂದು ಮೂರು ಲಕ್ಷ ರೂಪಾಯಿಯ ೩ ಯೂನಿಟ್‌ಗಳನ್ನು ಮಾಡಿ ಒಂದೊಂದು ಯೂನಿಟ್‌ನಲ್ಲಿ ಮೂರು ಮೂರು ಅಂತಸ್ತಿನ ಕಟ್ಟಡ ಕಟ್ಟಿ ಒಂದೊಂದು ಅಂತಸ್ತಿನಲ್ಲಿ ೪ ಸಂಸಾರಗಳಿಗೆ ಅಂದರೆ ಒಂದು ಯೂನಿಟ್ಟಿನಲ್ಲಿ ಒಟ್ಟು ಮೂರು ಅಂತಸ್ತಿನಲ್ಲಿ ೧೨ ಸಂಸಾರಗಳಿಗೆ ಅಂದರೆ ಒಟ್ಟು ಮೂರು ಯೂನಿಟ್‌ನಲ್ಲಿ ೩೬ ಸಂಸಾರಗಳಿಗೆ ವಾಸ ಮಾಡುವುದಕ್ಕೆ ಅನುಕೂಲವಾಗುವಂತೆ ೩ ಎಸ್ಟಿಮೇಟುಗಳನ್ನು ಮೈಸೂರು ಡಿವಿಜನಲ್ ಕಮಿಷನರ್ ಅವರಿಗೆ ಮುನಿಸಿಪಲ್ ಕಮಿಷನರ್‌ರವರು ಕಳಿಸಿಕೊಟ್ಟಿದ್ದಾರೆ. ಅದನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರೂ ಸ್ಕ್ರುಟಿನಿ ಮಾಡಿ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಿದ್ದಾರೆ. ಇತ್ತೀಚೆಗೆ ಎಲ್ಲಾ ಡಿವಿಜನಲ್ ಕಮಿಷನರ್ ಅವರಿಗೆ ಸರ್ಕಾರದಿಂದ ಒಂದು ಸುತ್ತೋಲೆಯನ್ನು ಕಳುಹಿಸಿ ಈಗ ಕಟ್ಟುತಕ್ಕ ಮನೆಗಳ ಬೆಲೆ ಜಾಸ್ತಿಯಾಗಬಾರದು, ಪೌರ ಕಾರ್ಮಿಕರಿಗೆ ಕಟ್ಟುತಕ್ಕ ಮನೆಯ ಒಟ್ಟು ಪೆಚ್ಚು ಒಂದು ಕ್ವಾರ್ಟರ್ಸ್‌ಗೆ ೧೦ ಸಾವಿರ ರೂಪಾಯಿಗಿಂತ ಮೀರಬಾರದು ಮತ್ತು ಮೈಸೂರಿನಲ್ಲಿ ಮೈಸೂರು ಕಾರ್ಪೊರೇಷನ್‌ನವರು ಸ್ಲಂ ಕ್ಲಿಯರೆನ್ಸ್ ಸ್ಕೀಂ ನಲ್ಲಿ ೬ ಸಾವಿರ ರೂಪಾಯಿಗಳಿಗೆ ಕ್ವಾರ್ಟರ್ಸ್ ಕಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡಿ ನೀವು ಕೆಲಸವನ್ನು ತೆಗೆದುಕೊಳ್ಳಬಹುದು ಎಂದು ತಿಳಿಸಲಾಗಿದೆ. ಡಿವಿಜನಲ್ ಕಮಿಷನರ್‌ರವರು ಸರ್ಕಾರದ ಆದೇಶವನ್ನು ಮುನಿಸಿಪಲ್ ಕಮಿಷನರ್ ಅವರಿಗೆ ಎಸ್ಟಿಮೇಟನ್ನು ರೀ-ಕಾಸ್ಟ್ ಮಾಡುವುದಕ್ಕೋಸ್ಕರ ಕಳುಹಿಸಿದ್ದಾರೆ.

ಶ್ರೀ ಬಿ. ಎ. ಬೊಪಿದ್ದೀನ್.—ಎಷ್ಟು ಸಮಯ ತೆಗೆದುಕೊಳ್ಳಬಹುದು ಅದಕ್ಕೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹೆಚ್ಚು ಸಮಯ ಏನೂ ತೆಗೆದುಕೊಳ್ಳುವುದಿಲ್ಲ, ಆದಷ್ಟು ಜಾಗ್ರತೆ ಮುನಿಸಿಪಾಲಿಟಿಯಿಂದ ಎಸ್ಟೀಮೇಟ್ ಕಡಿಮೆ ಮಾಡಿ ೧೦ ಸಾವಿರ ರೂಪಾಯಿಗೆ ಒಂದೂ ಬ್ಲಾಕ್‌ನಂತೆ ೩೬ ಸಂಸಾರಗಳಿಗೆ ಕಟ್ಟಿಡ ಕಟ್ಟುವುದಕ್ಕೆ ಅಂದಾಜನ್ನು ಕಳುಹಿಸಿಕೊಟ್ಟರೆ ಡಿವಿಜನಲ್ ಕಮಿಷನರ್‌ರಿಂದ ಮಂಜೂರು ಮಾಡಿಸಿ ಕಟ್ಟಿಡ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎ. ಮೊಹಿದ್ದೀನ್.—ಆದಷ್ಟು ಬೇಗ ಎಸ್ಟಿಮೇಟ್ ಮಾಡಿಸಿ ಕಟ್ಟಿಡ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡುತ್ತಿರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಒಂದೊಂದು ಯೂನಿಟ್ಟಿಗೆ ೩ ಲಕ್ಷ ರೂಪಾಯಿನ ಎಸ್ಟಿಮೇಟ್ ಏನು ತಯಾರು ಮಾಡಿದ್ದಾರೆ ಅದನ್ನು ಏಂದೊಂದು ಯೂನಿಟ್ಟಿಗೆ ೧,೨೦,೦೦೦ ರೂಪಾಯಿನಂತೆ ಎಸ್ಟಿಮೇಟನ್ನು ಕಡಿಮೆ ಮಾಡಿ ಅಂದಾಜನ್ನು ಡಿವಿಜನಲ್ ಕಮಿಷನರ್‌ಗೆ ಕಳಿಸಿಕೊಟ್ಟರೆ ಮಂಜೂರು ಮಾಡಿಸುತ್ತೇನೆ. ಮುನಿಸಿಪಲ್ ಕಮಿಷನರ್ ಅವರಿಗೆ ಆದಷ್ಟು ಜಾಗ್ರತೆ ಎಸ್ಟಿಮೇಟನ್ನು ವಾಪಸ್ ಕಳಿಸಿಕೊಡುವಂತೆ ಆದೇಶ ಕೊಡುತ್ತೇನೆ.

SRI P. K. RANGANATH.—18 percent of the budget of the local bodies will have to be earmarked exclusively for the upliftment of the SC/STs. So, whether these quarters are purely meant for Poura Karmikas or other SC/STs like Gangmen etc., working in Municipalities are also provided with these quarters?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಪೌರಕಾರ್ಮಿಕರೆಂದು ಆ ವರ್ಗದಲ್ಲಿ ಯಾರುಯಾರು ಬರುತ್ತಾರೋ ಅವರಿಗೆ ಮಾತ್ರ ಅದು ಅನ್ವಯಿಸುತ್ತದೆ, ಗ್ಯಾಂಗ್‌ಮನ್‌ಗಳು ಪೌರ ಕಾರ್ಮಿಕವರ್ಗಕ್ಕೆ ಬರುವುದಿಲ್ಲ. ಪೌರಕಾರ್ಮಿಕರೆಂದು ಯಾರನ್ನು ಕರೆದಿದ್ದಾರೋ ಅವರಿಗೆ ಮಾತ್ರ ಕ್ವಾರ್ಟರ್ಸ್ ಸಿಗುತ್ತದೆ, ಗ್ಯಾಂಗ್‌ಮನ್‌ಗಳಿಗಾಗಲೀ ವೇಸ್ಟ್ರಿಗಳಿಗಾಗಲೀ ಕೊಡುವುದಿಲ್ಲ,

೧-೩೦ ಪಿ.ಎಂ.

ಶ್ರೀ ಪುಪ್ಪಾಪತಿ.—ಶೇಕಡ ೧೮ ಭಾಗವನ್ನು ಬರೀ ಪೌರ ಕಾರ್ಮಿಕರಿಗೆ ಉಪಯೋಗಿಸುತ್ತೀರೋ? ಅಥವಾ ಇತರೇ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೂ ಉಪಯೋಗಿಸುತ್ತೀರೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಶ್ರೀ ಪುಪ್ಪಾಪತಿಯವರು ದಾವಣಗೆರೆ ಮುನಿಸಿಪಾಲಿಟಿಗೆ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಅನುಭವ ಇದೆ. ಶೇಕಡ ೧೮ ಭಾಗವನ್ನು ಯಾವ ಯಾವುದಕ್ಕೆ ಖರ್ಚು ಮಾಡಬೇಕೆಂದಿದೆಯೋ ಆ ಕಾರಣಕ್ಕಾಗಿ ಖರ್ಚು ಮಾಡಿದರಾಯಿತು.

ಒಬ್ಬ ಮಾನ್ಯ ಸದಸ್ಯರು.—ಶೇಕಡ ೧೮ ಭಾಗ ಹಣವನ್ನು ಖರ್ಚು ಮಾಡದೆ ಇರುವಂತಹ ಮುನಿಸಿಪಾಲಿಟಿಯ ಅಧ್ಯಕ್ಷರನ್ನು ಏಕೆ ತೆಗೆದು ಹಾಕಬಾರದೆಂದು ನಾನು ಕೇಳುತ್ತೇನೆ.

ಶ್ರೀ ಎಚ್. ಸಿ ಶ್ರೀಕಂಠಯ್ಯ.—ಎಲ್ಲೆಲ್ಲಿ ಆ ರೀತಿಯಾಗಿ ಖರ್ಚು ಮಾಡಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಒತ್ತಾಯ ಮಾಡಿ ಖರ್ಚು ಮಾಡಿಸುತ್ತೇವೆ.

Sites to Landless Families at Athikaribettu Village Dakshina Kannada District.

329. DR. DAMODAR MULKY (Moodabidri).—Will the Minister of State for Housing be pleeased to state :—

(*a*) the number of sites distributed to landless families in Athikaribettu Village, Mangalore Taluk, Dakshina Kannada ;

(*b*) the number of applications received from landless families of the above said villages ?